APRIL 05, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ದೇಶದ ಹಸಿರು ಕ್ರಾಂತಿಯ** ಹರಿಕಾರ, ಮಾಜಿ ಉಪ ಪ್ರಧಾನಮಂತ್ರಿ ಡಾಕ್ಟರ ಬಾಬು ಜಗಜೀವನ ರಾಮ್ ಅವರ, 119 ನೇ ಜಯಂತಿಯನ್ನು, ಇಂದು ನಾಡಿನಾದ್ಯಂತ ಆಯೋಜಿಸಲಾಗಿದೆ. ಬಾಬು ಜಗಜೀವನ ರಾಮ್ ಅವರ ಸಾಮಾಜಿಕ ಕೊಡುಗೆಗಳನ್ನು ಸ್ಮರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶೋಷಿತ ವರ್ಗದ ದನಿಯಾಗಿದ್ದ ಬಾಬು ಜಗಜೀವನ ರಾಮ ಅವರ ಜೀವನ ಹಾಗೂ ಸಾಧನೆ ಆದರಣೀಯ ಎಂದಿದ್ದಾರೆ. ಬಾಬೂಜಿಯವರು ಆರಂಭಿಸಿದ ಸುಧಾರಣಾ ಚಳವಳಿಯನ್ನು ಮುನ್ನಡೆಸಿಕೊಂಡು ಹೋಗುವ ಹೊಣೆ ಎಲ್ಲರದ್ದಾಗಿದೆ ಎಂದು ತಿಳಿಸಿರುವ ಮುಖ್ಯಮಂತ್ರಿಯವರು, ತಮ್ಮ ಗೌರವ ನಮನಗಳನ್ನು ಸಲ್ಲಿಸಿದ್ದಾರೆ. ದೇಶದ ಉಪ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಬಾಬು ಜಗಜೀವನ್ ರಾಮ್, ಕಾರ್ಮಿಕ ಹಕ್ಕುಗಳು, ಆಹಾರ ಸುರಕ್ಷೆ ಹಾಗೂ ದೇಶದ ರಕ್ಷಣಾ ವ್ಯವಸ್ಥೆಯನ್ನು ಸುದೃಢಗೊಳಿಸಿ, ನ್ಯಾಯ ಹಾಗೂ ಸಮಾನತೆಯ ಆಶಯಗಳನ್ನು ಬೆಳೆಸಿದ್ದರು ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಮ್ಮ ಎಕ್ಸ್ ಖಾತೆಯ ಮೂಲಕ ಬಣ್ಣಿಸಿದ್ದಾರೆ.

<><><>

**ವಿಜಯಪುರ ನಗರದ, ಸ್ಯಾಟಲೈಟ್** ಬಸ್ ನಿಲ್ದಾಣದ ಮುಂಭಾಗ ದಲ್ಲಿರುವ ಡಾಕ್ಟರ ಬಾಬು ಜಗಜೀವನ್ ರಾಮ್ ಪ್ರತಿಮೆಗೆ, ಶಾಸಕ ವಿಠಲ ಕಟಕಧೋಂಡ, ಪಾಲಿಕೆ ಮಹಾಪೌರ ಮಡಿವಾಳಪ್ಪ ಕರಡಿ, ಜಿಲ್ಲಾಧಿಕಾರಿ ಡಾಕ್ಟರ ಕೆ. ಆನಂದ ಮಾಲಾರ್ಪಣೆ ಮಾಡಿ, ಗೌರವ ನಮನಗಳನ್ನು ಸಲ್ಲಿಸಿದರು.

<><><>

**ಗದಗ ಜಿಲ್ಲಾಡಳಿತ ಭವನದಲ್ಲಿ** ಆಯೋಜಿತ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ, ಡಾಕ್ಟರ ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾಕ್ಟರ ದುರುಗೇಶ ಪುಷ್ಪನಮನ ಸಲ್ಲಿಸಿದರು.

<><><>

**ಇಂದು ಯೇಸು ಕ್ರಿಸ್ತನ,** ಪುನರುತ್ಥಾನದ, ಈಸ್ಟರ್ ಸಂಡೆ. ಯೇಸು, ಶುಭ ಶುಕ್ರವಾರದಂದು ಶಿಲುಬೆಗೇರಿ, ಮರಣವನ್ನು ಜಯಿಸಿದ, ಸಂತೋ ’ದ ದಿನ. ನಾಡಿನಾದ್ಯಂತ, ಕ್ರೈಸ್ತ ಬಾಂಧವರು, ಈ ದಿನವನ್ನು ಶ್ರದ್ಧಾ, ಭಕ್ತಿಯ ಪ್ರಾರ್ಥನೆಯೊಂದಿಗೆ, ಸಂಭ್ರಮದ ಹಬ್ಬವಾಗಿ, ಆಚರಿಸುತ್ತಿದ್ದಾರೆ. ಧಾರವಾಡ ಜಿಲ್ಲೆ, ಅಳ್ನಾವರದ ಸೇಂಟ್ ಆನ್ಸ್ ಚರ್ಚ್, ಧರ್ಮ ಗುರುಗಳಾದ, ಫಾದರ ಜೋಸೆಫ್ ಲೊಪಿಜ್, ಈಸ್ಟರ ಸಂಡೇ ವಿಶೇಷತೆ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಫಾದರ ಜೋಸೆಫ್ ಲೊಪಿಜ್ ಧ್ವನಿ – 37 ಸೆಕೆಂದುಗಳು**

<><><>

**ರಾಜ್ಯ ಸರ್ಕಾರದ,** ವಿವಿಧ ಇಲಾಖೆಗಳಲ್ಲಿ, 1 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇದ್ದು, ಅವುಗಳ ಭರ್ತಿಗೆ, ರಾಜ್ಯ ಸರ್ಕಾರ, ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು, ವಿಧಾನಸಭೆ ವಿಪಕ್ಷ ನಾಯಕ, ಆರ್. ಅಶೋಕ, ಮುಖ್ಯಮಂತ್ರಿಯವರನ್ನು ಒತ್ತಾಯಿಸಿದ್ದಾರೆ. ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಿ, ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಒದಗಿಸುವಂತೆ, ಆಗ್ರಹಿಸಿದ್ದಾರೆ.

<><><>

**ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕಿನ** ನೂತನ ನ್ಯಾಯಾಲಯ ಕಟ್ಟಡವನ್ನು, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಹಾಗೂ ಹೈಕೋರ್ಟ ನ ನ್ಯಾಯಮೂರ್ತಿಗಳಾದ ಹಂಚಾಟೆ ಸಂಜೀವ್‌ಕುಮಾರ್ ಜಂಟಿಯಾಗಿ ಉದ್ಘಾಟಿಸಿದರು.

<><><>

**ಉತ್ತರ ಕನ್ನಡ ಜಿಲ್ಲೆ, ಕಾರವಾರದ** ಜಿಲ್ಲಾಧಿಕಾರಿ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಯೋಜಿತ, ಮಾಹಿತಿ ಹಕ್ಕು ಕಾಯಿದೆ –2005 ಕಾರ್ಯಾಗಾರದಲ್ಲಿ, ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ, ಡಾಕ್ಟರ ಹರೀಶ ಕುಮಾರ ಪಾಲ್ಗೊಂಡು, ಕಾಯಿದೆಯ ಮೂಲಕ ಆಡಳಿತ ವ್ಯವಸ್ಥೆಯ ಸುಧಾರಣೆ ಕುರಿತು ಮಾಹಿತಿ ನೀಡಿದರು.

<><><>

**ಹಾವೇರಿ ವಿಶ್ವವಿದ್ಯಾಲಯದ,** ಮೊದಲ ಘಟಿಕೋತ್ಸವ, ನಾಳೆ ಬೆಳಗ್ಗೆ 11 ಗಂಟೆಗೆ, ಗುದ್ಲೆಪ್ಪ ಹಳ್ಳಿಕೇರಿ ಕಾಲೇಜು ಸಭಾಂಗಣದಲ್ಲಿ, ಜರುಗಲಿದೆ. ಉಪ ಕುಲಪತಿ ಸುರೇಶ ಜಂಗಮಶೆಟ್ಟಿ ಮಾಹಿತಿ ನೀಡಿ, ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ, ಕುಲಾಧಿಪತಿ ಥಾವರಚಂದ ಗೆಹ್ಲೋಟ ಗೌರವ ಡಾಕ್ಟರೆಟ್ ಪ್ರದಾನಿಸಲಿದ್ದಾರೆ ಎಂದರು.

<><><>

**ಧಾರವಾಡ, ವಿದ್ಯಾಗಿರಿಯ,** ಜೆ.ಎಸ್.ಎಸ್–ಜನತಾ ಶಿಕ್ಷಣ ಸಂಸ್ಥೆಯ, ಶಿಕ್ಷಣ ಸಮಿತಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ, ಡಾಕ್ಟರ ಅಜಿತ ಪ್ರಸಾದ ಅವರ, 75 ನೇ ಹುಟ್ಟು ಹಬ್ಬದ, ಅಮೃತ ಮಹೋತ್ಸವ ಕಾರ್ಯಕ್ರಮ, ಇಂದು ಜೆ.ಎಸ್.ಎಸ್ ಆವರಣದ ಸನ್ನಿಧಿ ಕಲಾಕ್ಷೇತ್ರದಲ್ಲಿ ಆಯೋಜಿತವಾಗಿದೆ. ಗಣ್ಯರು ಪಾಲ್ಗೊಂಡಿದ್ದು, ಕಾರ್ಯಕ್ರಮ ಪ್ರಗತಿಯಲ್ಲಿದೆ.

<><><>

**ವಿಜಯನಗರ ಜಿಲ್ಲೆಯಲ್ಲಿ,** ಬಿರು ಬೇಸಿಗೆ ಹಿನ್ನೆಲೆ, ಕುಡಿಯುವ ನೀರಿನ ತೊಂದರೆಯಾಗದಂತೆ, ಅಗತ್ಯ ಮುಂಜಾಗ್ರತೆ ಕೈಗೊಂಡಿದ್ದಾಗಿ, ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಹೇಳಿದ್ದಾರೆ.

<><><>

**ಕಲಬುರಗಿ ಜಿಲ್ಲೆ, ಉದ್ಯೋಗ ವಿನಿಮಯ ಕಚೇರಿಯಲ್ಲಿ,** ಈ ತಿಂಗಳ 8ನೇ ತಾರೀಖು, ಬೆಳಗ್ಗೆ 10 ರಿಂದ ಮಧ್ಯಾಹ್ನ 12.30 ಗಂಟೆಯ ವರೆಗೆ, ಉದ್ಯೋಗ ಮೇಳ ಜರುಗಲಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>